### ಶೇ 40ರಷ್ಟು ಹೃದ್ರೋಗಗಳಿಗೆ ಕಂಡುಬರದ ನಿಖರ ಕಾರಣ: ಡಾ.ಮಂಜುನಾಥ ಕಳವಳ

# ಹರೆಯದವರಲ್ಲಿ ಹೆಚ್ಚಿದ ಹೃದಯಾಘಾತ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: 'ಅಂದಾಜು 20ರಿಂದ 35 ವರ್ಷದೊಳಗಿನ ಹರೆಯದವರಲ್ಲೇ ಈಗ ಹೃದಯಾಘಾತಗಳು ಹೆಚ್ಚುತ್ತಿವೆ. ಅಶಿಸ್ತಿನ ಜೀವನಶೈಲಿ ಹಾಗೂ ಮೊಬೈಲ್ ಬಳಕೆಯ ಪರಿಣಾಮಗಳೇ ಇದಕ್ಕೆ ಮುಖ್ಯ ಕಾರಣ' ಎಂದು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ ಕಳವಳ ವ್ಯಕ್ತಪಡಿಸಿದರು.

'ಕೇವಲ ಎರಡು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ 2,400 ಯುವಜನ ಹೃದಯಾಘಾತಕ್ಕೆ ಒಳಗಾಗಿದ್ದಾರೆ. ಶೇ 40ರಷ್ಟು ಹೃದಯಾಘಾತಗಳಿಗೆ ಯಾವುದೇ ತರದ ನಿಖರ ಕಾರಣ ಕಂಡುಬಂದಿಲ್ಲ. ರಕ್ತದೊತ್ತಡ, ಮಧುಮೇಹ, ಧೂಮಪಾನ, ವಾಯುಮಾಲಿನ್ಯದಂಥ ಕಾರಣಗಳು ಸಾಮಾನ್ಯ. ಆದರೆ, ಯುವಕರೇ ರೂಢಿಸಿಕೊಂಡ ರೋಗಗ್ರಸ್ಥ ಜೀವನಶೈಲಿಯಿಂದ ತೊಂದರೆ ಅನುಭವಿಸುತ್ತಿದ್ದಾರೆ' ಎಂದು ಅವರು ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಮಕ್ಕಳಲ್ಲಿ ಈಗ ಮೊಬೈಲ್ ಗೀಳು ಹೆಚ್ಚಾಗಿದೆ. ಮೊದಲು ತಂದೆ-ತಾಯಿ ಕೆಲಸಕ್ಕೆ ಹೋದಾಗ ಮಕ್ಕಳು ಒಂಟಿತನ ಅನುಭವಿಸುತ್ತಿದ್ದರು. ಆದರೆ, ಈಗ ಎಲ್ಲರ ಮಧ್ಯೆ ಇದ್ದರೂ ಅವರವರ ಮೊಬೈಲ್‌ನಲ್ಲಿ ಅವರು ಮಗ್ನರಾಗುತ್ತಿದ್ದಾರೆ. ಈ ಒಂಟಿತನ ಕೂಡ ಹೃದಯಾಘಾತಕ್ಕೆ ಕಾರಣ. ಚಲನೆ ಇಲ್ಲದೇ ಒಂದೇ ಸ್ಥಳದಲ್ಲಿ ನಿರಂತರ ಐದು ತಾಸು ಕುಳಿತಿದ್ದರೆ ಅವರು ಐದು ಸಿಗರೇಟ್ ಸೇದಿದಷ್ಟೇ ಅನಾರೋಗ್ಯವಂತರು' ಎಂದರು.



ಕಲಬುರ್ಗಿಯಲ್ಲಿ ಜಯದೇವ ಆಸ್ಪತ್ರೆಯ ನೂತನ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳವನ್ನು ಡಾ.ಮಂಜುನಾಥ ಅವರು ಮಂಗಳವಾರ ಪರಿಶೀಲಿಸಿದರು

'50ರ ನಂತರ ಸಂಭವಿಸುವ ಬಹುಪಾಲು ಹೃದಯಾಘಾತಗಳಿಗೆ ಮಧುಮೇಹ ಕಾರಣವಾಗಿದೆ. ಅದರೊಳಗಿನವರಲ್ಲಿ ಶೇ 30ರಷ್ಟು ರೋಗಿಗಳು ವಾಹನಗಳ ಚಾಲಕರಾಗಿದ್ದಾರೆ. ಮಾತ್ರವಲ್ಲ, ಇದರ ಬಗ್ಗೆ ಎಲ್ಲವೂ ಗೊತ್ತಿರುವ ವೈದ್ಯಕೀಯ, ಎಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲೂ ಈ ರೋಗ ಕಂಡುಬರುತ್ತಿದೆ' ಎಂದರು.

'ಕೆಲಸದ ಅತಿ ಒತ್ತಡದಿಂದಾಗಿ ವೈದ್ಯರೂ ಹೃದಯರೋಗಿ ಆಗುತ್ತಿದ್ದಾರೆ. ಎಂಥದ್ದೇ ನಿತ್ರಾಣ ಸ್ಥಿತಿಯಲ್ಲಿರುವ ರೋಗಿಯನ್ನೂ ಬದುಕಿಸಲೇಬೇಕು ಎಂಬ ಒತ್ತಡ ಅವರಿಗೆ ಹೆಚ್ಚುತ್ತಿದೆ. ಚಿಕಿತ್ಸೆ ವೇಳೆ ರೋಗಿ ಸ್ಪಂದಿಸದೆ ಮೃತಪಟ್ಟರೂ ವೈದ್ಯರಿಗೆ ಕಷ್ಟ ತಪ್ಪಿದ್ದಲ್ಲ. ಈ ಒತ್ತಡದಿಂದಾಗಿ ಅವರು ಊಟ, ನಿದ್ರೆ ಕಳೆದುಕೊಂಡು ರೋಗಿಗಳಾಗುತ್ತಿದ್ದಾರೆ' ಎಂದೂ ಡಾ.ಮಂಜುನಾಥ ವಿಷಾದಿಸಿದರು.

### ಜಯದೇವ ಸಾಧನೆ

**411**
ಈವರೆಗೆ ಮಾಡಿದ ಯಶಸ್ವಿ ತೆರೆದ ಹೃದಯ ಶಸ್ತ್ರಚಿಕಿತ್ಸೆಗಳು

**9,122**
ಕರೋನರಿ ಆ್ಯಂಜಿಯೊಗ್ರಾಂ ಮಾಡಿಸಿಕೊಂಡವರು

**3,855**
ಕರೋನರಿ ಆ್ಯಂಜಿಯೊಪ್ಲಾಸ್ಟಿಗೆ ಒಳಗಾದವರು

**1,99 ಲಕ್ಷ**
ಈವರೆಗಿನ ಹೊರರೋಗಿಗಳ ಸಂಖ್ಯೆ

